

ರಾಜ ವಾಸಿಸುವ ಕ್ಯಾಸಲ್




ಪ್ರವಾಸಿಗರಿಗೆ ಮುಖ್ಯ ಸ್ಥಳಗಳ ಪರ್ಯಟನೆಗೆ ಟ್ರಾಂ

ಬರುತ್ತದೆ. ಈ ದೇಶದವರು ಇತರ ದೇಶಗಳ ಕಪ್ಪು ಹಣವನ್ನು ಇರಿಸಲು ಅನುಮತಿ ಕೊಟ್ಟಿದ್ದರಿಂದ ಈ ದೇಶಕ್ಕೆ 'ತೆರಿಗೆ ವಂಚಕರ ಸ್ವರ್ಗ' ಎಂಬ ಹೆಸರೂ ಇದೆ. ಸ್ವಿಝರ್ಲೆಂಡ್‌ನಂತೆ ಈ ದೇಶ ಕೂಡ ಎರಡನೇ ಮಹಾಯುದ್ಧದಲ್ಲಿ ತಟಸ್ಥ ನೀತಿ ಹೊಂದಿತ್ತು.

ಆಗಸ್ಟ್ 15 ಈ ದೇಶದ ಜನರಿಗೆ ರಾಷ್ಟ್ರೀಯ ರಜಾ ದಿನ. ಆದರೆ ನಮ್ಮಂತೆ ಸ್ವಾತಂತ್ರ್ಯೋತ್ಸವ ಅಲ್ಲ. ಅವತ್ತು ರಾಜ ಜನರೆಲ್ಲರಿಗೂ ತನ್ನ ಕ್ಯಾಸಲ್‌ನಲ್ಲಿ ಬೀರ್ ಹಂಚುತ್ತಾನೆ.

ಸುಂದರ ಪ್ರವಾಸಿ ತಾಣವಾದ ಲೀಚೆನ್‌ಸ್ಟೇನ್ ಚಳಿಗಾಲದಲ್ಲಿ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತದೆ. ಆಗ ಮಂಜು ಮತ್ತು ಹಿಮಗಳಲ್ಲಿ ಆಡುವ ಆಟಗಳು, ಸ್ಪರ್ಧೆಗಳಿಗೆ ಮತ್ತು ಮನರಂಜನೆಗೆ ಈ ನಗರ ಹೆಸರುವಾಸಿ. ಈ ಸಮಯದಲ್ಲಿ ಸಾಕಷ್ಟು ಪ್ರವಾಸಿಗರನ್ನು ಆಕರ್ಷಿಸಿ ಪ್ರವಾಸೋದ್ಯಮದಿಂದ ಹಣ ಗಳಿಸುತ್ತದೆ. ಈ ದೇಶದ ಹಿಮ ಕ್ರೀಡಾಪಟುಗಳು ಹಲವು ಒಲಿಂಪಿಕ್ಸ್ ಕ್ರೀಡಾಕೂಟಗಳಲ್ಲಿ ಸ್ಪರ್ಧಿಸಿ ಪದಕಗಳನ್ನು ಗಳಿಸಿದ್ದಾರೆ.

ಲೀಚೆನ್‌ಸ್ಟೇನ್ ದೇಶದ ಬಾವುಟ ಕ್ರಿ.ಶ 1719 ರಿಂದ 1852ವರೆಗೂ ನಮ್ಮ ನಾಡ ಬಾವುಟದಂತೆಯೇ ಅರಿಶಿನ ಮತ್ತು ಕುಂಕುಮ ಬಣ್ಣದ ಪಟ್ಟಿಗಳಿಂದ ಕೂಡಿತ್ತು. ನಂತರದ ಕಾಲದಲ್ಲಿ ಅದನ್ನು ನೀಲಿ ಮತ್ತು ಕೆಂಪು ಬಣ್ಣಕ್ಕೆ ಬದಲಿಸಿದರು. ಹೈಟಿ ದೇಶದ್ದೂ ಅದೇ ರೀತಿಯಿದೆ ಎಂದು ಅನಂತರದ ಕಾಲದಲ್ಲಿ ತಮ್ಮ ರಾಜನ ಗುರುತಾಗಿ ಕಿರೀಟವನ್ನು ಸೇರಿಸಿಕೊಂಡರು.

ಮೆಕ್ಕೆ ಜೋಳ, ಆಲೂಗಡ್ಡೆ. ದ್ರಾಕ್ಷಿ ಇಲ್ಲಿನ ಬೆಳೆಗಳು. ನಮ್ಮಲ್ಲಿ ಕೋಲು ನೆಟ್ಟು ಟೊಮ್ಯಾಟೋ ಬೆಳೆಯುವಂತೆ ಇವರು ಕೋಲು ನೆಟ್ಟು ದ್ರಾಕ್ಷಿ ಬೆಳೆದು ವೈನ್ ತಯಾರಿಸುತ್ತಾರೆ. ಇಲ್ಲಿ ತಯಾರಾಗುವ ವೈನ್ ಉತ್ತಮ ಗುಣಮಟ್ಟದ್ದೆಂದು ಹೆಸರಾಗಿದೆ. ಇಲ್ಲಿ ಹೈನುಗಾರಿಕೆಯೂ ಇದೆ. ಜಗತ್ತಿನಲ್ಲಿ ಅಪರಾಧ ಪ್ರಮಾಣ ಅತ್ಯಂತ ಕಡಿಮೆ ಇರುವ ದೇಶಗಳಲ್ಲೊಂದು ಈ ಲೀಚೆನ್‌ಸ್ಟೇನ್.

**ಅಂಚೆ ಚೀಟಿ:** ಭೂತಾನ್ ದೇಶದಂತೆ ಅಂಚೆ ಚೀಟಿಗಳಿಂದಲೂ ಈ ದೇಶ ಆದಾಯ ಗಳಿಸುತ್ತದೆ. ಅಂಚೆ ಚೀಟಿ ಸಂಗ್ರಹಕಾರರಿಗೆ ಈ ದೇಶ ಬಲು ಪ್ರಿಯ. ವಡೂಜ್ ನಗರದಲ್ಲಿ ಸ್ಟಾಂಪ್ ಮಾರುವ ಹಲವಾರು ಅಂಗಡಿಗಳೇ ಇವೆ. ಇಲ್ಲಿನ ಪ್ರವಾಸೋದ್ಯಮ ಇಲಾಖೆ ಕಚೇರಿಯಲ್ಲಿ ಮೂರು ಯೂರೋ ಪಡೆದು ಪ್ರವಾಸಿಗರ ಪಾಸ್‌ಪೋರ್ಟ್‌ನಲ್ಲಿ ಮುದ್ರೆ ಹಾಕಿಕೊಡುತ್ತಾರೆ. ಅಲ್ಲಿಂದ ಹೊರಟು ಸುಮಾರು ಒಂದು ಗಂಟೆ ಕಾಲ ಈ ಪುಟ್ಟ ದೇಶದ ಮುಖ್ಯ ಸ್ಥಳಗಳ ಪರ್ಯಟನೆ ಮಾಡಿಸಲು ಒಮ್ಮೆಗೆ 100 ಜನರನ್ನು ಕೊಂಡೊಯ್ಯುವ ಟ್ರಾಮ್ ವಾಹನವಿದೆ. ಇದರ ಮಂದಸ್ಮಿತ ಮುಖದ ಚಾಲಕ ವಾಹನವನ್ನು ಅಲ್ಲಲ್ಲಿ ನಿಲ್ಲಿಸಿ ಜಾಗದ ವಿವರಣೆ ನೀಡುತ್ತಾನೆ.

**ಕೃತಕ ಹಲ್ಲು:** ಕೃತಕ ಹಲ್ಲು ತಯಾರಿಕೆಯಲ್ಲಿ ಲೀಚೆನ್‌ಸ್ಟೇನ್ ಪ್ರಸಿದ್ಧಿ ಪಡೆದಿದೆ. ಶಾನ್ ನಗರದ ಇವೋಕ್ಲಾರ್ ವಿವೇಡೆಂಟ್ ಕಂಪೆನಿ 60 ದಶಲಕ್ಷ ಕೃತಕ ಹಲ್ಲುಗಳನ್ನು ಪ್ರತಿ ವರ್ಷ ತಯಾರಿಸಿ ಪ್ರಪಂಚಾದ್ಯಂತ ರಫ್ತು ಮಾಡುತ್ತದೆ. ನಮ್ಮ ಬಾಲಿವುಡ್ ದಂತ ವೈದ್ಯರು ಇವರ ಗ್ರಾಹಕರಾದ್ದರಿಂದ







ಲೀಚೆನ್‌ಸ್ಟೇನ್ ದೇಶದ ಸುಂದರ ಅಂಚೆ ಚೀಟಿಗಳು

ನಮ್ಮ ನಟ ನಟಿಯರ ಸುಂದರ ನಗುವಿಗೆ ಈ ದೇಶ ಸಹಕಾರಿಯಾಗಿದೆ.

**ದೇಶ ಬಾಡಿಗೆಗೆ ಇದೆ:** ಇವರು ತಮ್ಮ ದೇಶವನ್ನು ಬಾಡಿಗೆ ಕೊಡುತ್ತಾರೆ! ಇಲ್ಲಿನ ಜನ ಶ್ರೀಮಂತರಾದರೂ ಅವರು ಯಾವುದೇ ಹಬ್ಬಗಳನ್ನಾಗಲೀ, ವಿವಾಹಗಳನ್ನಾಗಲೀ ಅದ್ದೂರಿಯಾಗಿ ಮಾಡುವುದಿಲ್ಲ. ಅಂತಹ ಕಾರ್ಯಕ್ರಮಗಳಿಗೆ ವಿನಿಯೋಗಿಸುವಂತಹ ಹಣವನ್ನು ದೇಶಕ್ಕೆ ನೀಡಿ ಸಾಂಕೇತಿಕವಾಗಿ ದೇಶವನ್ನು ಬಾಡಿಗೆ ಪಡೆಯುತ್ತಾರೆ.

ಬಾಡಿಗೆ ಪಡೆದವರೇ ಅಂದಿನ ಮಂತ್ರಿ, ಜಿಲ್ಲಾಧಿಕಾರಿ, ಪೌರಾಯುಕ್ತ ಎಲ್ಲವೂ! ಎಲ್ಲ ಕಚೇರಿಯ ಉನ್ನತ ಹುದ್ದೆಗಳೂ ಅವರಿಗೇ ಮೀಸಲು. ಅಂದಿನ ದಿನ ಎಲ್ಲರೂ ಬಾಡಿಗೆ ಪಡೆದವರಿಗೆ ಶುಭ ಕೋರುತ್ತಾರೆ.

ಈ ವ್ಯವಸ್ಥೆಯಲ್ಲಿ ಸಿಗುವ ಹಣವನ್ನು ದೇಶದ ಪರಿಸರ ಅಭಿವೃದ್ಧಿ, ನಿರ್ವಹಣೆ ಮತ್ತು ಸೌಂದರ್ಯ ವರ್ಧನೆಗೆ ಬಳಸುತ್ತಾರೆ. ನಿಜಕ್ಕೂ ಇದೊಂದು ಅಪರೂಪದ ದೇಶ.